# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1908** |
| ಸದಸ್ಯರ ಹೆಸರು | : | **ಶ್ರೀ. ಸಿ ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸುವ ದಿನಾಂಕ | : | **24/03/2026** |
| ಉತ್ತರಿಸುವ ಸಚಿವರು | : | **ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು** |

| | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು); | ಮೈಸೂರು ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ತಾಲೂಕುವಾರು ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ. |
| ಆ | ಮೈಸೂರು ಜಿಲ್ಲೆಯ ಜನಸಂಖ್ಯೆಗನುಗುಣವಾಗಿ ಅರ್ಹವಿರುವ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಹಾಗೂ ಪುರಸಭೆಗಳನ್ನು ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ: (ವಿವರ ನೀಡುವುದು): | ಪ್ರಸ್ತುತ ಮೈಸೂರು ಜಿಲ್ಲೆಯಲ್ಲಿನ ಯಾವುದೇ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಹಾಗೂ ಪುರಸಭೆಯನ್ನು ನಗರಸಭೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.<br><br>ಕಳೆದ 2 ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿನ ಯಾವುದೇ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಹಾಗೂ ಪುರಸಭೆಯನ್ನು ನಗರಸಭೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಂದ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.<br><br>ಪ್ರಸ್ತುತ ರಾಷ್ಟ್ರದಾದ್ಯಂತ ಜನಗಣತಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಹೊಸ ನಗರ ಸ್ಥಳೀಯ ಸಂಸ್ಥೆಗಳನ್ನು ರಚಿಸುವ, ವ್ಯಾಪ್ತಿಯನ್ನು ವಿಸ್ತರಿಸುವ ಕಾಲಾವಕಾಶವು ದಿನಾಂಕ:31/12/2025 ರಂದು ಮುಕ್ತಾಯಗೊಂಡಿದ್ದು, ಇಂತಹ ಪ್ರಸ್ತಾವನೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. |
| ಇ | ಕಳೆದ 2 ವರ್ಷಗಳಲ್ಲಿ ಮೈಸೂರು ಜಿಲ್ಲೆಯ ಯಾವ ಯಾವ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮತ್ತು ಪುರಸಭೆಗಳನ್ನು ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ; ಈ ಪ್ರಕ್ರಿಯೆಯ ಪ್ರಸ್ತುತ ಯಾವ ಹಂತದಲ್ಲಿದೆ? (ಸಂಪೂರ್ಣ ವಿವರ ನೀಡುವುದು); | |

**ಸಂಖ್ಯೆ:ನಅಇ 30 ಎಲ್‌ಸಿಕ್ಯೂ 2026**

(ರಹೀಂ ಖಾನ್)

**ಪೌರಾಡಳಿತ ಹಾಗೂ ಹಜ್ ಸಚಿವರು**

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1908 ರ ಅನುಬಂಧ-1

**ಮೈಸೂರು ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳು:**

ನಗರಸಭೆಗಳು: 3

ಪುರಸಭೆಗಳು: 5

ಪಟ್ಟಣ ಪಂಚಾಯಿತಿಗಳು: 6

**ಮೈಸೂರು ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ತಾಲ್ಲೂಕುವಾರು ವಿವರ:**

| ತಾಲ್ಲೂಕು | ನಗರ ಸ್ಥಳೀಯ ಸಂಸ್ಥೆ ಹೆಸರು | | ತಾಲ್ಲೂಕು | ನಗರ ಸ್ಥಳೀಯ ಸಂಸ್ಥೆ ಹೆಸರು | |
|---|---|---|---|---|---|
| ನಂಜನಗೂಡು | 1 | ನಂಜನಗೂಡು ನಗರಸಭೆ | ಸರಗೂರು | 8 | ಸರಗೂರು ಪಟ್ಟಣ ಪಂಚಾಯಿತಿ |
| ಹುಣಸೂರು | 2 | ಹುಣಸೂರು ನಗರಸಭೆ | ಮೈಸೂರು | 9 | ಹೂಟಗಳ್ಳಿ ನಗರಸಭೆ |
| ಕೆ.ಆರ್ ನಗರ | 3 | ಕೆ.ಆರ್.ನಗರ ಪುರಸಭೆ | | 10 | ಬೋಗಾದಿ ಪಟ್ಟಣ ಪಂಚಾಯಿತಿ |
| ತಿ.ನರಸೀಪುರ | 4 | ಬನ್ನೂರು ಪುರಸಭೆ | | 11 | ಶ್ರೀರಾಂಪುರ ಪಟ್ಟಣ ಪಂಚಾಯಿತಿ |
| | 5 | ತಿ.ನರಸೀಪುರ ಪುರಸಭೆ | | 12 | ಕಡಕೊಳ ಪಟ್ಟಣ ಪಂಚಾಯಿತಿ |
| | 6 | ತಲಕಾಡು ಪಟ್ಟಣ ಪಂಚಾಯಿತಿ | | 13 | ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ |
| ಪಿರಿಯಾಪಟ್ಟಣ | 7 | ಪಿರಿಯಾಪಟ್ಟಣ ಪುರಸಭೆ | ಹೆಚ್.ಡಿ.ಕೋಟೆ | 14 | ಹೆಚ್.ಡಿ.ಕೋಟೆ ಪುರಸಭೆ |

----